ಮತ್ತೆ ಪೆದ್ದಯ್ಯನನ್ನು ಓಣಿ ಆಂಜನೇಯನ ಗುಡಿಯತ್ತಿರ ಹೊತ್ತು ತಂದು ಅವನನ್ನು ಮಲಗಿಸಿ ದೊಡ್ಡೀರಯ್ಯ, ಪಿಂಜರಗುಡ್ಡರಾತುಗುದ್ದನ್ನ ಇವರೆಲ್ಲರು ವೀಬೂತಿಯಲ್ಲಿ ರಂಗೋಲಿ ಹಾಕಿ, ಎಕ್ಕದ ಹೂ ಬಿಡಿಸಿಟ್ಟು ಮಂತ್ರತಂತ್ರ ಮಾಡಿಸಿ ರಾತ್ರಿಯೇ ಬೂದುಗುಡ್ಡದಳ್ಳಿಗೆ ಬಂದು ಟೆಂಟು ಕಟ್ಟಿಕೊಂಡರು.

ಪೆದ್ದಯ್ಯ ನೀರು ಕೂಡ ಕುಡಿಯುತ್ತಿರಲಿಲ್ಲ. ಆಗಾಗ್ಗೆ ಪುಟಗೋಸಿ ಬದಲಾಯಿಸಿದರೂ ಭೇದಿ ಮಾಡಿಕೊಳ್ಳುತ್ತಿದ್ದ. ಎಲ್ಲರಿಗೂ ಗೊತ್ತಾಗಿ ಹೋಯಿತು, ಈ ಪೆದ್ದನ್ನ ಉಳಿಯುವುದು ಅನುಮಾನವೆಂದು. ಕಂದಮ್ಮ ಆ ರಾತ್ರಿ ಬೂದುಗುಟ್ಟದಳ್ಳಿಯೆಲ್ಲಾ ಸುತ್ತಿ ತಕಾರಿ ಸಾರು, ಮುದ್ದೆ ಚೂರು ಹಾಕಿಸಿಕೊಂಡು ಬರುವಷ್ಟರಲ್ಲಿ ಪೆದ್ದಯ್ಯ ತೀರಿಕೊಂಡಿದ್ದ.

'ಸುತ್ಲ ಊರಾಗ ದೊಡ್ಡಮ್ಮ ಕಲ್ರ ಅಂತ ಕಾಯ್ಲೆ ಬಂದು ಜನ ಸತ್ತವ್ರೆ, ಈ ಹೆಣಾನ ಹಿಂಗಾ ಇಲ್ಲೇ ಹಳ್ಳದತ್ರ ಉಸ್ಕು ತೆಗೆದು ಮಲಗ್ಸಿ ಕಾರ್ಯ ಮುಗ್ಸಾನು' ಎಂದು ಪಿಂಜರ ಗುಡ್ಲ ಹೇಳುತ್ತಿದ್ದಂತೆ ಕಂದಮ್ಮ, 'ಗೊಳೋ...' ಎಂದು ಅಳುತ್ತಾ ಹೆಣದ ಎದೆಯ ಮೇಲೆ ಬಿದ್ದು ಗೋಳಾಡ ಹತ್ತಿದಳು.

'ಏಳು ನನ ಸಾಮ್ಗೆ, ನಾ ಯಾವ ಗಂಡ್ಸ ಮ್ಯಾಲ ಮನ್ಸ ಇಟ್ಕಂಡಿಲ್ಲಾ, ಏಳಾ, ಏಳಾ!'

'ಹಂಗೆಲ್ಲಾ ಜೋರಾಗಿ ಅತ್ರ ಊರ್ನ ಜನ ನಮ್ಮನ ಇಲ್ಲಿ ಇರಾಕ ಬಿಡ್ತಾರೇನು ಕಂದ, ಆತು ಗುಟ್ಟಾಗಿ ಕಾರ್ಯ ಮುಗಸಾಣು' ಎಂದು ದೊಡ್ಡೀರಯ್ಯ ಹೇಳುತ್ತಿದ್ದಂತೆ, ಆ ಎರಡು ಹೆಣ್ಣುಮಕ್ಕು ನಾರಕ್ಕಗುರಮ್ಮನ್ನ ಕರ್ಕೊಂಡು ಬಂದು, 'ಅವರಪ್ಪನ ಮಕಾನ ಕೊನಿ ದಪಾ ನೋಡ್ಸರಾ' ಎಂದು ಬೋಡಕ್ಕಾ ಹೇಳಿದಾಗ ದೊಡ್ಡೀರಯ್ಯ, 'ಇಕಾ, ಈ ಕಲ್ಲರ ಕಾಯಿಲೆ ಅಂದ್ರ ರಕ್ತ ಕಕ್ಕಿ ಸಾಯ್ತಾರ, ಭಾವನ ಬಾಯನಾಗ ರಕ್ತದ ಕಲೆ ಆಯ್ತಿ. ಇದು ಕಲ್ಲರ ಕಣ ತಂಗಿ, ಇನ್ನ ಯಾವ ಮಾತ ಬ್ಯಾಡ ಹೆಣ ಹೊತ್ಕೊಂಡು ಹಳ್ಳದ ಕಡಿ ಹೋಗಾನು'

ಮೂರು ದಿವಸದ ದಿನ ದೊಡ್ಡೀರಯ್ಯನ ಬಳಗ ಕಾವಳ್ಳಿ ಕೆರೆಯಾಗ ಮೈ ತೊಳ್ಕಂಡು ಅಲ್ಲೇ ಬಯಲಲ್ಲಿ ಕುಂದ್ಲಿ ಪಡ್ಡೆ ಕೊಯ್ದು ಬೇಯ್ಸಿ ಎಡೆ ಇಟ್ಟು ಪೆದ್ದಯ್ಯನ ಮಕ್ಕಳ ಕೈಲಿ ಪೂಜೆ ಮಾಡಿಸಿ, ಕಂದಮ್ಮನನ್ನು ಕೆರಿಯೊಳಗ ಮೈ ತೊಳ್ಸಿ ಬಯಲ ಬಂಡೆಮ್ಯಾಲ ಕುಳ್ಳಿರಿಸಿ ಬಳೆ ಮುರಿದಿದ್ದು ಆಯ್ತು.

ಹಿಂಗಾನ ಎಲ್ಡು ತಿಂಗ್ಳು ಕಳಿತಾನ ಒಂದು ಸಂಜೆ ಒಂದು ಗಡಿಗಿ ಏಡಿಕಾಯಿ ಹಿಡಿದುಕೊಂಡು ಬಂದು ಗಮ್ಮನ ಆಮ್ರ ಮಾಡಿ ಹೆಂಡ ಕುಡಿದು ಬಯಲಾಗ ಕುಂತ ಹತ್ತಾಳು ಕುಲದ ಕಟ್ಟೇಮನಿ ಕುಲದ ಬುದ್ಧಿವಂತರನ್ನ ನೋಡಿದ ಕಂದಮ್ಮ ಆತಂಕದಲ್ಲಿ ಬಿದ್ದಳು.

ಗಡ್ಡ ನೀವುತ್ತಾ ರಾತಗುದ್ದನ್ನ, 'ಇನ್ನು ಯಾಕ ಕಂದಮ್ಮನ ಜೊತೀನಾಗ ಇಟ್ಕಂಡಿದ್ದೀ ದೊಡ್ಡೀರಯ್ಯ, ಇದು ಗೊತ್ತಿರಾನ ಇಸ್ಯ, ಪೆದ್ದಯ್ಯನ ಓಲಿ ವರಾಯಿ ಹನ್ನೆರಡಾಣೆ ಗಂಡನ ಮನೀಗ ವಾಪಸ್ಸ ಕೊಟ್ಟು ಹೊಸ ಮಗಳ್ನ ಮಾಡಿ ಕೂಡಿಕಿ ಮಾಡಾನು' ದೊಡ್ಡೀರಯ್ಯ ಗಂಭೀರವಾಗಿ ಯೋಚಿಸುತ್ತಲೇ, 'ಇದು ಕುಲಕ್ಕ ಗೊತ್ತಿರೊ ಇಸ್ಯಾನೆ, ಆದ್ರೆ ತಂಗಿ ಏಳಿ ಬಸಿರವಳೇ' ಎನ್ನುತ್ತಿದ್ದಂತೆ, 'ನೂನಿ ಮಿಂಚಾಮಿ ಕೂಡಿಕೆ ಮಾಡ್ಕಂಡ ಮ್ಯಾಲ ಕೂಸು ಅವನ್ದ ತಾನೆ.'

ಬಯಲಲ್ಲಿ ಕುಂತು ಇದನ್ನೆಲ್ಲಾ ಕೇಳಿಸಿಕೊಳ್ಳುತ್ತಿದ್ದ ಕಂದಮ್ಮ ಬಿಕ್ಕುತ್ತಿದ್ದಳು. ತನ್ನ ಎಲ್ಡು ಹೆಣ್ಣುಮಕ್ಕಳನ್ನು ಬಿಟ್ಟು ಮತ್ತೊಬ್ಬನನ್ನು ಕೂಡಿಕೆ ಮಾಡಿಕೊಂಡು ಹೊರಡುವುದು ಕಲ್ಪಿಸಿಕೊಂಡರೆ ತಲೆ ಗಿರ್ರೆನ್ನುತ್ತಿತ್ತು. ಆದರೆ, ಅಣ್ಣನ ಮಾತು ಎಂದರೆ ತಿರುಗಿ